ಓ ಎಸ್ ನಂಃ 242/2021
ಡಿ. ಡಬ್ಲ್ಯೂ- 1

**(ಇಂದು ದಿನಾಂಕ 11-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ**

ನಾನು ಹುಟ್ಟಿ ಬೆಳದದ್ದು ಧಾರವಾಡದಲ್ಲಿ. ನಾನು ಎಮ್ ಎಸ್ ಓದಿರುತ್ತೇನೆ. ನಾನು ಪ್ರಜಾ ಟಿವಿಯಲ್ಲಿ ವರದಿಗಾರ ಆಗಿರುತ್ತೇನೆ. ನಾನು ಪ್ರತಿ ತಿಂಗಳು ರೂ.10 ಸಾವಿರ ಆದಾಯ ಇರುತ್ತದೆ. ದಾವಾ ಆಸ್ತಿ ಮಾತ್ರ ನಮಗೆ ಕೃಷಿ ಜಮೀನು. ವರದಿಗಾರಿಗೆ ಮತ್ತು ಕೃಷಿ ಹೊರತು ಪಡಿಸಿ ಬೇರೆ ಉದ್ಯೋಗ ಮಾಡುತ್ತಿರುವುದಿಲ್ಲ. ದಾವಾ ಜಮೀನು 22 ಗುಂಟೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಮಾವಿನ ಗೀಡ ಮತ್ತು ಕೋಳಿ ಫಾರ್ಮ ಇರುತ್ತದೆ. ಮಾವಿನ ಗಿಡ 20 ವರ್ಷದ್ದು ಇರುತ್ತದೆ. 2015 ರಿಂದ ಕೋಳಿ ಫಾರ್ಮ ಇರುತ್ತದೆ. ನಾನು 2017 ರಲ್ಲಿ ಶೀವಪ್ಪ ರಾಮಪ್ಪ ಅವರಿಂದ ಖರೀದಿ ಮಾಡಿರುತ್ತೇನೆ. ನನ್ನ ಖರೀದಿ ಪತ್ರದಲ್ಲಿ ಮಾರಾಟದ ಹಣ ರೂ.1 ಲಕ್ಷ ಚಿಲ್ಲರೆ ತೋರಿಸಿರುತ್ತೇನೆ. ಅದು ಆಗಿನ ಮಾರಾಟದ ಬೇಲೆ.

ವಾದಿ 15 ವರ್ಷದಿಂದ ನನ್ನ ಕುಟುಂಬಕ್ಕೆ ಪರಿಚಯಸ್ಥ. ನಾನು ಮತ್ತು ವಾದಿ ವೇಂಕಾಟಾದ್ರಿ ಅಪಾರ್ಟಮೆಂಟನಲ್ಲಿ ವಾಸವಾಗಿದ್ದೇವು. ವಾದಿ ಮತ್ತು ನಾನು ನಮ್ಮ ಮನೆಗೆ ಅವರು ಅವರ ಮನೆಗೆ ನಾವು ಹೋಗಿ ಬಂದು ಮಾಡುತ್ತಿದ್ದೆವು. ಜನೇವರಿ 2021 ರಲ್ಲಿ ನಮಗೆ ಹಣದ ಅವಶ್ಯಕತೆ ಇತ್ತು ಎಂದರೆ ಸರಿ. ನಿ.ಪಿ.1 ರಲ್ಲಿ ಬರೆದಿರುವ ರೂ.10 ಲಕ್ಷ 2 ಚೆಕ್ ಮುಖಾಂತರ ನನಗೆ ತಲುಪಿರುತ್ತದೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಿ.ಪಿ.1 ನಾನೇ ನೋಂದಣಿ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. ನಿ.ಪಿ.1 ರಲ್ಲಿ ಬರೆದಿರುವ ವಿಷಯ ಅದನ್ನು ಬರೆದುಕೊಡುವ ಸಮಯದಲ್ಲಿ ನನಗೆ ಗೊತ್ತಿರುತ್ತದೆ ಎಂದರೆ ಸರಿ. ದಸ್ತಬರಹಗಾರರು ವೇಂಕಟೇಶ ವಿ ಜೊಗಳೆಕರ ಎಂದರೆ ಸರಿ. ನಿ.ಪಿ.1 ಕ್ಕೆ ಯು ಎಮ್ ಮೇಸ್ತ್ರಿ ಮತ್ತು ಶಂಕರಗೌಡ ಪಾಟೀಲ ಹಾಜರಿದ್ದು ಸಾಕ್ಷಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ರೂ.12 ಲಕ್ಷಕ್ಕೆ ಮಾರಾಟ ಮಾಡುವ ಉದ್ದೇಶದಿಂದ ರೂ.10 ಲಕ್ಷ

ಹಣ ಪಡೆದು ನಿ.ಪಿ.1 ನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

2021 ಜನೇವರಿಯಲ್ಲಿ ನನಗೆ ಕಿರಾಣಿ ಅಂಗಡಿಯಿಂದ ಪ್ರತಿ ದಿನ ರೂ1000/- ಲಾಭಂಶದ ಆದಾಯ ಇತ್ತು. ಅದನ್ನು ಬೇರೆ ಹೊರತು ಪಡಿಸಿ ಬೇರೆ ಆದಾಯ ಇರಲಿಲ್ಲ. ನಾನು ಜಿ ಎಸ್ ಟಿ ತೇರಿಗೆ ಪಾವತಿಸಿರುತ್ತೇನೆ. ನಾನು ಇವತ್ತಿನವರೆಗೆ ಆದಾಯ ತೇರಿಗೆ ಪಾವತಿಸಿರುವುದಿಲ್ಲ. ಈವರೆಗೆ ನನ್ನ ಆದಾಯ ತೇರಿಗೆ ಮೀತಿ ಒಳಗಡೆ ಇತ್ತು. ನಾನು ಅವಶ್ಯಕತೆ ಇದ್ದಾಗ ವಾದಿಯಿಂದ ಸಣ್ಣ ಪುಟ್ಟ ಸಾಲ ಪಡೆಯುತ್ತಿದ್ದೆನು ಎಂದರೆ ಸರಿಯಲ್ಲ. ನನ್ನ ತಂದೆ ಸಾಲ ಪಡೆಯುತ್ತಿದ್ದರು. ನನ್ನ ತಾಯಿ ಸಾಲ ಪಡೆಯುತ್ತಿರಲಿಲ್ಲ. ಅದನ್ನು ಮರುಪಾವತಿಯನ್ನು ಬಡ್ಡಿ ಸಮೇತ ಪಾವತಿ ಮಾಡುತ್ತಿದ್ದೇವು. ಸದರಿ ಸಾಲಕ್ಕೆ ಮತ್ತು ಬಡ್ಡಿಗೆ ಲಿಖಿತ ದಾಖಲೆ ಇರುವುದಿಲ್ಲ. ನನ್ನ ತಂದೆ ಆದಾಯ ತೇರಿಗೆ ಪಾವತಿಸುತ್ತಾರೆ. ನನ್ನ ತಂದೆ ವಾದಿಯಿಂದ ಪಡೆದ ಸಾಲ ಮತ್ತು ಮರುಪಾವತಿಯನ್ನು ಆದಾಯ ತೇರಿಗೆಯಲ್ಲಿ ತೋರಿಸಿರುವುದಿಲ್ಲ. ಎಷ್ಟು ಸಲ ಸಾಲ ಪಡೆದಿದ್ದರು ಎಂದು ಗೊತ್ತಿರುವುದಿಲ್ಲ. ಆ ಬಗ್ಗೆ ನನ್ನ ತಂದೆ ಸಾಕ್ಷಿ ಮಾಡಿಸಬಹುದು. ನಿ.ಡಿ.4 ನ್ನು ನನ್ನ ತಂದೆ ವಾದಿಗೆ ರೂ.2 ಲಕ್ಷ ಹಣ ಪಾವತಿಸಿರುತ್ತಾರೆ ಎಂದು ತೋರಿಸಲು ಹಾಜರುಪಡಿಸಿರುತ್ತೇನೆ. ನಿ.ಡಿ.4 ರ ಪ್ರಕಾರ ನನ್ನ ತಂದೆ 19-01-2021 ರಂದು ಹಣ ಪಾವತಿಸಿರುತ್ತಾರೆ. ಸದರಿ ದಿನಾಂಕದ 4 ದಿನಗಳ ನಂತರ ಖರೀದಿ ನೋಂದಾವಣಿ ಆಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ.1 ನ್ನು 25-01-2021 ರಂದು ಮಾಡಲಾಗಿರುತ್ತದೆ. ಸಾಕ್ಷಿಯು ಅದನ್ನು 18-01-2021 ರಂದು ಬರೆಯಲಾಗಿರುತ್ತದೆ ಎನ್ನುತ್ತಾರೆ. ನನ್ನ ತಂದೆ ಹೊಲದ ವ್ಯವಹಾರಕ್ಕಾಗಿ ನಿ.ಡಿ.4 ರ ಅಡಿ ಹಣ ಪಾವತಿ ಮಾಡಿರುತ್ತಾರೆ. ನಿ.ಡಿ.4 ರಲ್ಲಿ ನ ಹಣ ಪಾವತಿ ನನ್ನ ತಂದೆ ವಾದಿಯಿಂದ ಪಡೆದ ಸಾಲದ ಮರುಪಾವತಿ ಎಂದರೆ ಸರಿಯಲ್ಲ. ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಲೀಗಲ್ ನೊಟೀಸ ನನಗೆ ಅಂಚೆ ಮೂಲಕ ತಲುಪಿರುತ್ತದೆ. ನನಗೆ ಅದರ ಅಂಶಗಳು ತಿಳಿದುಕೊಂಡಿರುತ್ತೇನೆ. ವಾದಿಯ ಲೀಗಲ್ ನೋಟಿಸಗೆ ಉತ್ತರ ನೀಡಿರುವುದಿಲ್ಲ ಎಂದರೆ ಸರಿ. ನಾನು ವಾದಿಯೊಂದಿಗೆ ಖರೀದಿ ಕರಾರು ಪತ್ರ ಮಾಡಿಕೊಂಡ ವಿಷಯ ನೀಜ ಇದ್ದ ಕಾರಣ

ನೋಟಿಸಗೆ ಉತ್ತರ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ನಿ.ಪಿ.1 ರ ದಿನದಿಂದ ಬಾಕಿ ಉಳಿದ ರೂ.2 ಲಕ್ಷ ಹಣ ಪಾವತಿ ಮಾಡಿ ಖರೀದಿ ಪತ್ರ ಬರೆಯಿಸಿಕೊಳ್ಳುವ ಶಕ್ತಿ ಇರುತ್ತದೆ ಎಂದರೆ ಇರಬಹುದು. ವಾದಿ ಖರೀದಿ ಪತ್ರ ಬರೆಯಿಸಿಕೊಳ್ಳಲು ಸಿದ್ದರಿದ್ದರು ಕೂಡಾ ನಾನು ಖರೀದಿ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ.5 ರಲ್ಲಿ ನಮೂದಿಸಿದ ಹಣ, ಆ ಸಮಯದಲ್ಲಿ ಕೊರೊನಾ ಇದ್ದ ಕಾರಣ ನಾವು ಬ್ಯಾಂಕ ಹೋಗಿ ಹಣ ತರಲು ಆಗದೆ ಇರುವ ಕಾರಣ ಪೋನ ಪೆ ಮುಖಾಂತರ ವಾದಿಗೆ ಹಣ ಸಂದಾಯ ಮಾಡಿ ಅವರ ಮುಖಾಂತರ ನಗದು ಹಣ ಹಂತ ಹಂತವಾಗಿ ಪಡೆದುಕೊಂಡಿರುತ್ತೆವೆ ಎಂದರೆ ಸರಿಯಲ್ಲ. ನಿ.ಡಿ.5 ರಲ್ಲಿ ನಮೂದಿಸಿದ ಹಣ ವಾದಿಗೆ ಮರುಪಾವತಿ ಮಾಡಿದ ಹಣ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ.5 ರಲ್ಲಿ ತೋರಿಸಿದ ಹಣವನ್ನು ಹೊರತು ಪಡಿಸಿ ಬೇರೆ ಹಣ ಪಾವತಿ ಮಾಡಿರುತ್ತೆನೆ ಎಂದು ತೊರಿಸಲು ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಡಿ.10 ರಿಂದ 13 ಪೋಟೊಗಳು ದಾವಾ ಆಸ್ತಿಗೆ ಸಂಬಂದಿಸಿದ ಪೋಟೊ ಅಲ್ಲ ಎಂದರೆ ಸರಿ. ನಿ.ಪಿ.1 ರಂತೆ ಖರೀದಿ ಕರಾರು ಪತ್ರ ಮಾಡಿಕೊಂಡಿದ್ದು ಹೆಚ್ಚಿನ ಹಣವನ್ನು ಮುಂಗಡವಾಗಿ ಪಡೆದುಕೊಂಡಿರುತ್ತೆನೆ ಎಂದರೆ ಸರಿಯಲ್ಲ. ನಿ.ಡಿ.1 ಮತ್ತು 2 ಖರೀದಿ ಪತ್ರಗಳು ಎರಿಕೊಪ್ಪ ಗ್ರಾಮದವುಗಳು ಆಗಿರುತ್ತದೆ. ಎರಿಕೊಪ್ಪ ಗ್ರಾಮ ನುಗ್ಗಿಕೇರಿ ಗ್ರಾಮಕ್ಕೆ ಹೊಂದಿಕೊಂಡಿರುತ್ತವೆ ಎಂದರೆ ಸರಿ. ಎರಿಕೊಪ್ಪ ಗ್ರಾಮ ಜಮೀನುಗಳು ಕಲಘಟಗಿ ರಸ್ತೆಯ ರಾಜ್ಯ ಹೆದ್ದಾರಿ ಸೇತುವೆ ವರೆಗೆ ಇರುತ್ತವೆ ಎಂದರೆ ಇರಬಹುದು. ದಾವಾ ಆಸ್ತಿ ಕಣವಿಹೊನ್ನಾಪುರ ಗ್ರಾಮದಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿ ನಿ.ಡಿ.1 ಮತ್ತು2 ರ ಆಸ್ತಿಗೆ ಸುಮಾರು 8 ಕಿ.ಮೀ. ಅಂತರ ಇರುತ್ತದೆ ಎಂದರೆ ಸರಿ. ನಿ.ಡಿ.3 ನ್ನು ನನ್ನ ತಾಯಿ ಖಾತೆಯಿಂದ ವಾದಿಯ ಹೆಂಡತಿಯ ಖಾತೆಗೆ ರೂ.1 ಲಕ್ಷ ಹಣ ಸಂದಾಯ ಮಾಡಿರುತ್ತೆವೆ ಎಂದರೆ ಸರಿ. ನನ್ನ ತಾಯಿ ಮತ್ತು ವಾದಿಯ ಹೆಂಡತಿ ವ್ಯವಹಾರ ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ನಿ.ಡಿ.5 ರಲ್ಲಿರುವ ನಕ್ಷೆಗೆ ಮತ್ತು ದಾವಾ ಆಸ್ತಿಗೂ ಸಂಬಂದ ಇರುತ್ತದೆ ಎಂದರೆ ಸರಿಯಲ್ಲ. ನಿ.ಡಿ.7 ರಲ್ಲಿ ಹೇಳಿರುವಂತೆ ನಾನು ಯಾವುದೇ ಕೆಲಸ ಮಾಡಿರುವುದಿಲ್ಲ ಅದನ್ನು ಶುಸ್ಟಿಸಿ ಹಾಜರುಪಡಿಸಿರುತ್ತೆನೆ ಎಂದರೆ ಸರಿಯಲ್ಲ. ನಾನು ವಾದಿಯೊಂದಿಗೆ ಖರೀದಿ

ವ್ಯವಹಾರ ಮಾಡಿದ್ದರು ಕೂಡಾ ಅದನ್ನು ಅವರ ಹಣ ಮುಳಗಿಸಲು ಮತ್ತು ದಾವಾ ಆಸ್ತಿ ಹೆಚ್ಚಿನ ಹಣಕ್ಕೆ ಮಾರಾಟ ಮಾಡಲು ವಾದಿಯ ಖರೀದಿ ಕರಾರು ಪತ್ರವನ್ನು ಅಲ್ಲಗಳುಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.